# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 34/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಡಾ. ಛಾಯಕುಮಾರಿ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆಯ ಹೆಸರು** | ಃ ಕೃಷ್ಣ | | **07.02.2020** |
| **ವಯಸ್ಸು** | ಃ 45 ವರ್ಷ | | |
| **ವೃತ್ತಿ** | ಃ ಪ್ರಭಾರ ಉಪ ನಿರ್ದೇಶಕರು, ಆರ್.ಎಫ್.ಎಸ್.ಎಲ್. ದಾವಣಗೆರೆ | **ಪ್ರಾ.ಸಾ. ಃ** | **09** |
| **ವಾಸಸ್ಥಳ** | ಃ ದಾವಣಗೆರೆ | **ಚಾ.ಸಾ. ಃ** | **40** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ದಿನಾಂಕಃ *04.03.2011* ರಿಂದ *23.09.2016* ರವರೆಗೆ ಆರ್.ಎಫ್.ಎಸ್.ಎಲ್. ಮೈಸೂರಿನಲ್ಲಿ ಪ್ರಭಾರ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕಃ *26.05.2016* ರಂದು ಉದಯಗಿರಿ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ *59/2016* ಕ್ಕೆ ಸಂಬಂಧಪಟ್ಟಂತೆ *11* ಸೀಲ್ ಮಾಡಿದ ವಸ್ತುಗಳನ್ನು ಎ.ಸಿ.ಪಿ. ದೇವರಾಜ ಉಪ ವಿಭಾಗದವರು ಪಿ.ಸಿ.*452* ರವರ ಮುಖಾಂತರ ವಸ್ತುಗಳನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿದ್ದರು. ಪ್ರಯೋಗಾಲಯದ ಸ್ವಾಗತ ವಿಭಾಗದವರು ಸದರಿ ವಸ್ತುಗಳನ್ನು ಸ್ವೀಕರಿಸಿ ಆರ್.ಎಫ್.ಎಸ್,ಎಲ್./ಬಿಎಸ್*/682/2016* ಎಂದು ನೋಂದಣಿ ಮಾಡಿ ಜೀವ ಶಾಸ್ತ್ರ ವಿಭಾಗಕ್ಕೆ ಕಳುಹಿಸಿದ್ದರು. ನಾನು ವಸ್ತುಗಳನ್ನು ಜೀವ ಶಾಸ್ತ್ರ ವಿಭಾಗದಲ್ಲಿ ಸ್ವೀಕರಿಸಿ ವಸ್ತುಗಳ ಮೇಲಿರುವ ಅರಗಿನ ಮುದ್ರೆಗಳು ಹಾಗೂ ವಿವರಗಳು ಸರಿಯಾಗಿ ಇದ್ದವು ಮತ್ತು ಮಾಲು ಪಟ್ಟಿ ವಿವರಗಳಿಗೆ ಹೋಲಿಕೆ ಯಾಗುತ್ತಿದ್ದವು. ನಾನು ವಸ್ತುಗಳನ್ನು ಪರೀಕ್ಷೆಗಾಗಿ ಬಿಚ್ಚಿ ನೋಡಿದಾಗ ವಸ್ತು ಸಂಖ್ಯೆ *1* ರಕ್ತ ಮಿಶ್ರಿತ ಟಾರ್, ವಸ್ತು ಸಂಖ್ಯೆ *2* ಮಾದರಿ ಟಾರ್ ಮತ್ತು ವಸ್ತು ಸಂಖ್ಯೆ *3* ಮೈಸೂರು ಮಿತ್ರ ದಿನಪತ್ರಿಕೆ ವಸ್ತು ಸಂಖ್ಯೆ *4* ಒಂದು ಲಗ್ನ ಪತ್ರಿಕೆ, ವಸ್ತು

ಸಂಖ್ಯೆ *5* ಒಂದು ಶರ್ಟ, ವಸ್ತು ಸಂಖ್ಯೆ *6* ಒಂದು ಬನಿಯನ್, ವಸ್ತು ಸಂಖ್ಯೆ *7* ಒಂದು ಬೆಲ್ಟ ವಸ್ತು ಸಂಖ್ಯೆ *8* ಒಂದು ಪ್ಯಾಂಟ್, ವಸ್ತು ಸಂಖ್ಯೆ *9* ಒಂದು ಅಂಡರ್ ವೇರ, ವಸ್ತು ಸಂಖ್ಯೆ *10* ಒಂದು ರಿಸ್ಟ ಬ್ಯಾಂಡ್, ವಸ್ತು ಸಂಖ್ಯೆ *11* ವೇಸ್ಟ ತ್ರೇಡ್ (ಉಡುದಾರ), ಎಲ್ಲಾ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ *2* ನ್ನು ಹೊರತು ಪಡಿಸಿ ಉಳಿದ ಎಲ್ಲಾ ವಸ್ತುಗಳಲ್ಲಿ ರಕ್ತದ ಕಲೆಗಳು ಇರುವುದು ಕಂಡುಬಂದಿರುತ್ತದೆ. ಅವುಗಳ ವಿವರವನ್ನು ವರದಿಯಲ್ಲಿ ವಿವರವಾಗಿ ನಮೂದು ಮಾಡಿರುತ್ತೇನೆ. ನಂತರ ಸದರಿ ರಕ್ತದ ಕೆಲವು ಭಾಗಗಳನ್ನು ಸಿರಾಲೋಜಿ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ *1, 3* ರಿಂದ *11* ರಲ್ಲಿ ರಕ್ತವು ಮಾನವ ಮೂಲದ ರಕ್ತವಾಗಿರುತ್ತದ್ದು ಓ ಗುಂಪಿನ ರಕ್ತಕ್ಕೆ ಸೇರಿದ್ದು ಇರುತ್ತದೆ ಈ ಬಗ್ಗೆ ಪರೀಕ್ಷಾ ವರದಿಯನ್ನು ತಯಾರಿಸಿ ಸಹಿ ಮಾಡಿ ಮೇಲಾಧಿಕಾರಿಗಳ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ನಮ್ಮ ಪ್ರಯೋಗಾಲಯ ಮಾದರಿ ಮುದ್ರೆಯೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ವರದಿಯನ್ನು ನಿ.ಪಿ.*12* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*12*(ಎ) ಎಂದು ಗುರುತಿಸಲಾಯಿತು. ಮಾದರಿ ಸೀಲನ್ನು ನಿ.ಪಿ.*12*(ಬಿ) ಎಂದು ಗುರುತಿಸಲಾಯಿತು. ಪರೀಕ್ಷಿಸಿದ ವಸ್ತುಗಳನ್ನು ಪುನಃ ಸೀಲು ಮಾಡಿ ಸಂಬಂಧಪಟ್ಟ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ನೋಡಿ ಗುರುತಿಸಿದ್ದು ಶರ್ಟನ್ನು ಮು.ಮಾ.*7* ಎಂದು, ಬನಿಯನ್ ಮು.ಮಾ.*8* ಎಂದು, ಒಂದು ಬೆಲ್ಟ ಮು.ಮಾ.*9* ಎಂದು, ಒಂದು ಪ್ಯಾಂಟು ಮು.ಮಾ.*10* ಎಂದು, ಒಂದು ಅಂಡರ್ ವೇರನ್ನು ಮು.ಮಾ.*11* ಎಂದು, ಒಂದು ರಿಸ್ಟ ಬ್ಯಾಂಡನ್ನು ಮು.ಮಾ.*12* ಎಂದು, ಒಂದು ವೆಸ್ಟ ಥ್ರೆಡ್ (ಉಡುದಾರ) ವನ್ನು ಮು.ಮಾ. *13* ಎಂದು ಗುರುತಿಸಲಾಯಿತು. ಉಳಿದ ಮುದ್ದೆ ಮಾಲುಗಳನ್ನು ಮು.ಮಾ.*1* ಮತ್ತು *2* ಎಂದು ಮತ್ತು ನಿ.ಪಿ.*5* ಮತ್ತು *6* ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದಃ-**

. ನಾನು ವರದಿಯಲ್ಲಿ ಯಾವ-ಯಾವ ಪರೀಕ್ಷೆ ಮಾಡಿದ್ದೇನೆಂದು ನಮೂದು ಮಾಡಿರುತ್ತೇನೆ. ಅಬ್ಸರ್ವೇಷನ್ ಶೀಟನ್ನು ನಾನು ಹಾಜರುಪಡಿಸಿಲ್ಲ. ಪೊಲೀಸರ ಮನವಿಯ ಮೇರೆಗೆ ಯಾವುದೇ ಪರೀಕ್ಷೆ ಮಾಡದೇ ವರದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

*ಮರು ವಿಚಾರಣೆಃ- ಇಲ್ಲ.*

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೀ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*